159ಪಿಎ
26

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ಇವರು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:

**ವಿಷಯ:** ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಪ್ರವಾಸೋದ್ಯಮವನ್ನು ಪ್ರಾರಂಭಿಸಲು ಪ್ರವಾಸೋದ್ಯಮಕ್ಕೆ ಇರುವ ಅವಕಾಶಗಳ ಕುರಿತು ಚರ್ಚಿಸಲು ಅವಕಾಶ ನೀಡುವುದು.

**ಉತ್ತರ:**

ರಾಜ್ಯದಲ್ಲಿ ಪ್ರವಾಸಿಗರಿಗೆ ವಿಶ್ವ ದರ್ಜೆಯ ಪ್ರವಾಸಿ ಸೌಲಭ್ಯವನ್ನು ಒದಗಿಸಲು ಹಾಗೂ ಪ್ರವಾಸೋದ್ಯಮವನ್ನು ಉತ್ತೇಜಿಸಿ ಅಭಿವೃದ್ಧಿಪಡಿಸುವ ಹಿತದೃಷ್ಟಿಯಿಂದ ಪ್ರವಾಸೋದ್ಯಮ ಇಲಾಖೆಯಿಂದ ಕರ್ನಾಟಕ ಪ್ರವಾಸೋದ್ಯಮ ನೀತಿ 2024-29ನ್ನು ಜಾರಿಗೆ ತರಲಾಗಿರುತ್ತದೆ.

ಸದರಿ ನೀತಿಯಡಿ ವಿಜಯಪುರ ಜಿಲ್ಲೆಯಲ್ಲಿ 33 ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿ 28 ಸ್ಥಳಗಳನ್ನು ಪ್ರವಾಸಿ ತಾಣಗಳನ್ನಾಗಿ ಗುರುತಿಸಲಾಗಿದೆ. ಗುರುತಿಸಿರುವ ಪ್ರವಾಸಿ ತಾಣಗಳ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ.

ಪ್ರವಾಸೋದ್ಯಮವನ್ನು ಉತ್ತೇಜಿಸಿ ಅಭಿವೃದ್ಧಿಪಡಿಸುವ ದೃಷ್ಟಿಯಿಂದ 2024-29 ಪ್ರವಾಸೋದ್ಯಮ ನೀತಿಯಡಿ 25 ಪ್ರವಾಸಿ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಮುಂದೆ ಬರುವ ಖಾಸಗಿ ಬಂಡವಾಳ ಹೂಡಿಕೆದಾರರನ್ನು ಸೆಳೆಯಲು ಸಹಾಯಧನ, ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಇದಲ್ಲದೇ, ಈ ನೀತಿಯಡಿ ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಯನ್ನೊಳಗೊಂಡಂತೆ ಇಡೀ ಕಿತ್ತೂರು ಕರ್ನಾಟಕ ಭಾಗದಲ್ಲಿ ಹೂಡಿಕೆ ಮಾಡಲು ಮುಂದೆ ಬರುವ ಖಾಸಗಿ ಹೂಡಿಕೆದಾರರಿಗೆ ಹೆಚ್ಚುವರಿಯಾಗಿ ಶೇ.5ರಷ್ಟು ಸಹಾಯಧನವನ್ನು ನೀಡಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ಪ್ರವಾಸಿ ಸ್ಥಳಗಳಿಗೆ ದೇಶ ವಿದೇಶಗಳಿಂದ ಭೇಟಿ ನೀಡುವ ಪ್ರವಾಸಿಗರ ಸುರಕ್ಷತೆ ಹಾಗೂ ರಕ್ಷಣೆಯ ಹಿತದೃಷ್ಟಿಯಿಂದ ಪ್ರವಾಸಿ ಮಿತ್ರ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಪ್ರವಾಸಿಗರಿಗೆ ಪ್ರವಾಸಿ ಸ್ಥಳಗಳ ಇತಿಹಾಸ, ವಿಶೇಷತೆ ಹಾಗೂ ಇತರ ವಿವರಗಳನ್ನು ಪರಿಚಯಪಡಿಸಲು ಇಲಾಖೆಯಿಂದ ತರಬೇತಿ ಪಡೆದಿರುವ ನೋಂದಾಯಿತ ಪ್ರವಾಸಿ ಮಾರ್ಗದರ್ಶಿಗಳನ್ನು ನಿಯೋಜಿಸಲಾಗಿದೆ.

SCSP/TSP ಯೋಜನೆಯಡಿ ನಿರುದ್ಯೋಗಿ ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟ ಜಾತಿಯ ಯುವಕ/ಯುವತಿಯರಿಗೆ ವಿವಿಧ ಪ್ರವಾಸಿ ಕ್ಷೇತ್ರಗಳಾದ Multi-cuisine, Food & Beverages, Front office, Room attendant ಗಳಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡಿ ಸ್ವ-ಉದ್ಯೋಗ ಕಲ್ಪಿಸಿಕೊಡಲು ಅವಕಾಶವನ್ನು ನೀಡಲಾಗುತ್ತಿದೆ. ಸದರಿ ಯೋಜನೆ ಅಡಿಯಲ್ಲಿ Mobile Canteen ವಾಹನ ಖರೀದಿಸಲು ತರಬೇತಿಯನ್ನು ನೀಡಿ ತರಬೇತಿ ಪೂರ್ಣಗೊಳಿಸಿರುವ ಅಭ್ಯರ್ಥಿಗಳಿಗೆ ಸಹಾಯಧನವನ್ನು ನೀಡಲಾಗುತ್ತಿದೆ. ಮುಂದುವರೆದು, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟ ಜಾತಿಯ ನೋಂದಾಯಿತ ಪ್ರವಾಸಿ ಮಾರ್ಗದರ್ಶಿಗಳಿಗೆ ವಿದೇಶಿ ಭಾಷಾ ತರಬೇತಿಯನ್ನು ನೀಡಲಾಗುತ್ತಿದೆ ಹಾಗೂ ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಾದ ಬೆಳಗಾವಿ, ಧಾರವಾಡ, ಗದಗ, ಹಾವೇರಿ, ರಾಯಚೂರು, ಯಾದಗಿರಿ, ಬೀದರ್ ಹಾಗೂ ಉತ್ತರಕನ್ನಡ ಜಿಲ್ಲೆಗಳ ಒಟ್ಟು 8 ಜಿಲ್ಲೆಗಳ ಅಭ್ಯರ್ಥಿಗಳಿಗೆ ಪ್ರವಾಸಿ ಮಾರ್ಗದರ್ಶಿ ತರಬೇತಿಯನ್ನು ನೀಡಲಾಗುತ್ತಿದೆ. ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಸದರಿ ಯೋಜನೆಯಡಿ ತರಬೇತಿಯನ್ನು ಪಡೆದ ಅಭ್ಯರ್ಥಿ/ಫಲಾನುಭವಿಗಳ ವಿವರವನ್ನು **ಅನುಬಂಧ-2** ರಲ್ಲಿ ವಿವರಿಸಿದೆ.

ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿರುವ ಮರಳುಶಿಲ ಬೆಟ್ಟಗಳಲ್ಲಿ ಶಿಲಾರೋಹಣಾ ಚಟುವಟಿಕೆಗಳಿಗೆ ಅವಕಾಶಗಳಿವೆ. ಹೀಗಾಗಿ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ (GETHNAA) ವತಿಯಿಂದ ಶಿಲಾರೋಹಣ ಸ್ಪರ್ಧೆ ಸಮ್ಮೇಳನ ಆಯೋಜಿಸಿ ಪ್ರಚಾರ ಕಾರ್ಯ ಕೈಗೊಳ್ಳಲಾಗುತ್ತಿದೆ.

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಹೆರಕಲ್ ನಿಂದ ಚಿಕ್ಕಸಂಗಮ ಪ್ರದೇಶದವರೆಗೆ ವ್ಯಾಪಿಸಿರುವ ಆಲಮಟ್ಟಿ ಜಲಾಶಯದ ಹಿನ್ನೀರನ್ನು ಪ್ರವಾಸೋದ್ಯಮ ಚಟುವಟಿಕೆಗಳಿಗೆ ಬಳಸಿಕೊಳ್ಳುವ ಉದ್ದೇಶದಿಂದ ಬೋಟಿಂಗ್ ಆರಂಭಿಸಲು ಕೃಷ್ಣಾ ಭಾಗ್ಯ ಜಲನಿಗಮ ನಿಯಮಿತ (KBJNL) ವತಿಯಿಂದ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ರವರ ಪತ್ರ ಸಂಖ್ಯೆ: ಕೃಭಾಜನಿನಿ/ವ್ಯ.ನಿ./ತಾಂ.ಶಾ-5/ಚಿಕ್ಕಸಂಗಮ-ಹೆರಕಲ್ ಜಲಕ್ರೀಡೆ/2025-26/3924, ದಿನಾಂಕ:17.02.2026ರ ಪತ್ರದಲ್ಲಿ ಅಗತ್ಯ ಅನುಮತಿಯನ್ನು ಪಡೆಯಲಾಗಿದೆ. ಜೊತೆಗೆ ಸಾರ್ವಜನಿಕ-ಖಾಸಗಿ ಸಹಭಾಗಿತ್ವ (PPP) ಮಾದರಿಯಲ್ಲಿ ಜಲಸಾಹಸ ಕ್ರೀಡೆ, ಪ್ರವಾಸಿ ಸೌಲಭ್ಯಗಳು, ಹಾಗೂ ಇತರೆ ಆಕರ್ಷಣೆಗಳನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಕೇಂದ್ರ ಸರ್ಕಾರದ ಸಾಗರ ಮಾಲಾ ಯೋಜನೆಯಡಿ Inland Waterways Authority of India (IWAI) ಸಹಯೋಗದಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿಯಿಂದ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಹೆರಕಲ್-ಆಲಮಟ್ಟಿ ಹಿನ್ನೀರಿನಲ್ಲಿ ರಿವರ್ ಕ್ರೂಸ್ ಟೂರಿಸಂ ಯೋಜನೆ ಅನುಷ್ಠಾನಗೊಳ್ಳುತ್ತಿದೆ. ಯೋಜನೆಯ ಅನುಷ್ಠಾನವನ್ನು ತ್ವರಿತಗೊಳಿಸುವ ಉದ್ದೇಶದಿಂದ ಹೆರಕಲ್ ಗ್ರಾಮದಲ್ಲಿ ಅಗತ್ಯ ನಿವೇಶನವನ್ನು ಕರ್ನಾಟಕ ಜಲಸಾರಿಗೆ ಮಂಡಳಿಗೆ ಹಸ್ತಾಂತರಿಸುವ ಪ್ರಕ್ರಿಯೆಗೆ ಕೃಷ್ಣಾ ಭಾಗ್ಯ ಜಲನಿಗಮ ನಿಯಮಿತ (KBJNL) ಮೂಲಕ ಕೈಗೊಳ್ಳಲಾಗುತ್ತಿದ್ದು, ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ಅಗತ್ಯ ಅನುಸರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಬಾದಾಮಿ-ಐಹೊಳೆ-ಪಟ್ಟದಕಲ್ಲು ಸ್ಥಳಗಳು ಹಾಗೂ ಹಂಪಿ ಮತ್ತು ವಿಜಯಪುರ ಒಳಗೊಂಡಿರುವ ಉತ್ತರ ಕರ್ನಾಟಕ ಪ್ರವಾಸಿ ವೃತ್ತವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ರೂ.166.22 ಕೋಟಿ ಅಂದಾಜು ವೆಚ್ಚದಲ್ಲಿ ಕೆ.ಟಿ.ಐ.ಎಲ್ ಸಂಸ್ಥೆಯ ಮೂಲಕ ವಿನ್ಯಾಸ, ನಿರ್ಮಾಣ ಹಣಕಾಸು, ನಿರ್ವಹಣೆ ಮತ್ತು ವರ್ಗಾವಣೆ PPP ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ.

ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಪ್ರಚಾರ ದೃಷ್ಟಿಯಿಂದ 2013-14ನೇ ಸಾಲಿನಿಂದ 2022-23ನೇ ಸಾಲಿನವರೆಗೆ ಒಟ್ಟು ರೂ.180.00 ಲಕ್ಷಗಳನ್ನು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನದಲ್ಲಿ ಪ್ರವಾಸಿ ಹೋರ್ಡಿಂಗ್ಸ್, ಸೈನೇಜ್ ಕನ್ನಡ- ಆಂಗ್ಲ ಭಾಷೆಯಲ್ಲಿ ಪ್ರವಾಸಿ ಕೈಪಿಡಿಗಳು, ಪ್ರವಾಸಿ ತಾಣಗಳ ದೃಶ್ಯ ತುಣುಕುಗಳು, ಕಾಫಿ ಟೇಬಲ್ ಪುಸ್ತಕಗಳು, ಕ್ಯಾಲೆಂಡರ್ ಗಳು, ರೋಲ್ ಅಪ್ಸ್ ಫೋಟೋ ಫ್ರೇಮ್‌ಗಳನ್ನು ತಯಾರಿಸುವುದರ ಮೂಲಕ ಜಿಲ್ಲೆಯ ಪ್ರವಾಸಿ ಆಕರ್ಷಣೆಗಳನ್ನು ಪ್ರಚಾರಪಡಿಸಲು ಕ್ರಮವಹಿಸಲಾಗಿದೆ.

ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ ಬಾಗಲಕೋಟೆ ರವರ ಮೂಲಕ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿರುವ ದೇವಾಲಯಗಳ ತೊಟ್ಟಿಲು ಎಂದೇ ಪ್ರಖ್ಯಾತವಾದ ಐತಿಹಾಸಿಕ ಪ್ರವಾಸಿ ತಾಣ ಐಹೊಳೆ ಗ್ರಾಮದ ಸಂಪೂರ್ಣ ಸ್ಥಳಾಂತರ ಯೋಜನೆ ಅನುಷ್ಠಾನಗೊಳ್ಳುತ್ತಿದೆ. ಮೊದಲ ಹಂತದಲ್ಲಿ 134 ಮನೆಗಳ ಸ್ಥಳಾಂತರಕ್ಕೆ ರೂ.350.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಈ ಸಂಬಂಧ ಐಹೊಳೆ ಗ್ರಾಮದ ವ್ಯಾಪ್ತಿಯಲ್ಲಿ ಒಟ್ಟು 13-11 ಎ/ಗುಂ ಜಮೀನನ್ನು ಪ್ರತಿ ಎಕರೆಗೆ ರೂ.22.00 ಲಕ್ಷಗಳಂತೆ ನೇರ ಖರೀದಿಯಾಗಿರುತ್ತದೆ. ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಹ್ಯಾಬಿಟೇಟ್ ಕೇಂದ್ರ, ಬೆಂಗಳೂರು ರವರ ಮೂಲಕ ಸಮಗ್ರ ಲೇಔಟ್ ಅಭಿವೃದ್ಧಿ ಯೋಜನೆ (Comprehensive Development Plan)ಯನ್ನು ಸಿದ್ಧಪಡಿಸಲಾಗುತ್ತಿದೆ.

ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲು ಪ್ರವಾಸಿ ತಾಣದಲ್ಲಿ ಪ್ರವಾಸಿಗರಿಗೆ ಪಾರ್ಕಿಂಗ್ ಸೌಲಭ್ಯ, ಕೆಫೆಟೇರಿಯಾ, ಪ್ರವಾಸಿ ಮಾಹಿತಿ ಕೇಂದ್ರ, ಕರಕುಶಲ ಮಳಿಗೆ ಇತ್ಯಾದಿ ಸೌಲಭ್ಯಗಳನ್ನು ಒಂದೇ ಸೂರಿನಲ್ಲಿ ಒದಗಿಸಲು ರೂ.2925.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಪ್ರವಾಸಿ ಪ್ಲಾಜಾ ಕಾಮಗಾರಿಯನ್ನು ಇಲಾಖೆಯಿಂದ ಅನುಷ್ಠಾನ ಸಂಸ್ಥೆಯಾದ ಕರ್ನಾಟಕ ಗೃಹ ಮಂಡಳಿ ಮೂಲಕ ಕೈಗೊಳ್ಳಲಾಗುತ್ತಿದೆ. ಈ ಕಾಮಗಾರಿಗೆ ಈವರೆಗೆ ರೂ.2362.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಶೇಕಡ 80 ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ವಿಜಯಪುರ ಜಿಲ್ಲೆಯ ಭೂತನಾಳ ಕೆರೆಯ ಪ್ರದೇಶದಲ್ಲಿರುವ ಪ್ರವಾಸೋದ್ಯಮ ಇಲಾಖೆಯ ಜಮೀನಿನಲ್ಲಿ ರೂ.1674.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ತ್ರಿ-ಸ್ಟಾರ್ ಹೋಟೆಲ್ ನಿರ್ಮಾಣ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕಾಮಗಾರಿಗೆ ರೂ.1674.00 ಲಕ್ಷಗಳ ಅನುದಾನವನ್ನು ಅನುಷ್ಠಾನ ಸಂಸ್ಥೆಯಾದ M/s.RITES ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಅಂತಿಮ ಹಂತದಲ್ಲಿದೆ.

ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ತ್ರಿ-ಸ್ಟಾರ್ ಹೋಟೆಲ್ ನಿರ್ಮಾಣ ಕಾಮಗಾರಿಯನ್ನು ರೂ.1832.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಅನುಮೋದನೆ ನೀಡಿರುತ್ತದೆ. ರೂ.1760.00 ಲಕ್ಷಗಳ ಅನುದಾನವನ್ನು ಅನುಷ್ಠಾನ ಸಂಸ್ಥೆಯಾದ M/s.RITES ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ. ಶೇಕಡ 85 ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು ಬಾಕಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಂಬಂಧ ಬಂಡವಾಳ ವೆಚ್ಚಗಳು ಹಾಗೂ ಕೆ.ಟಿ.ವಿ.ಜಿ ಲೆಕ್ಕಶೀರ್ಷಿಕೆ ಅಡಿ ಕಳೆದ 3 ವರ್ಷಗಳಲ್ಲಿ ಇಲಾಖೆಯಿಂದ ರೂ.5176.53 ಲಕ್ಷಗಳ ಅಂದಾಜು ವೆಚ್ಚದಲ್ಲಿ 11 ಕಾಮಗಾರಿಗಳನ್ನು ಕೈಗೊಂಡಿದ್ದು, ರೂ.4597.53 ಲಕ್ಷಗಳ ಅನುದಾನವನ್ನು ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ.

ಮುಂದುವರೆದು, ವಿಜಯಪುರ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಂಬಂಧ ಬಂಡವಾಳ ವೆಚ್ಚಗಳು ಹಾಗೂ ಕೆ.ಟಿ.ವಿ.ಜಿ ಲೆಕ್ಕಶೀರ್ಷಿಕೆ ಅಡಿ ಕಳೆದ 3 ವರ್ಷಗಳಲ್ಲಿ ಇಲಾಖೆಯಿಂದ ರೂ.2374.00 ಲಕ್ಷಗಳ ಅಂದಾಜು ವೆಚ್ಚದಲ್ಲಿ 14 ಕಾಮಗಾರಿಗಳನ್ನು ಕೈಗೊಂಡಿದ್ದು, ರೂ.2005.00 ಲಕ್ಷಗಳ ಅನುದಾನವನ್ನು ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳು ವಿವಿಧ ಹಂತದಲ್ಲಿರುತ್ತವೆ. ಕಾಮಗಾರಿಗಳ ವಿವರವನ್ನು **ಅನುಬಂಧ-3** ರಲ್ಲಿ ಒದಗಿಸಿದೆ.

**ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಿಂದ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.**

**ವಿಜಯಪುರ ಜಿಲ್ಲೆ**

ವಿಜಯಪುರ ಜಿಲ್ಲೆಯಲ್ಲಿರುವ ಗೋಲ ಗುಮ್ಮಟ (Gol Gumbaz): ಇಬ್ರಾಹಿಂ ರೋಜಾ (Ibrahim Rauza): ಬಾರಾ ಕಮಾನ್ (Bara Kaman): ಜಾಮಾ ಮಸೀದಿ (Jama Masjid): ಗಗನ್ ಮಹಲ್ ಮತ್ತು ಆನಂದ್ ಮಹಲ್: ಶಿವಗಿರಿ (Shivagiri): ಪ್ರಮುಖ ಪ್ರವಾಸಿ ತಾಣಗಳಾಗಿವೆ.

**ತಾಜ್ ಬಾವಡಿ ಸ್ಮಾರಕ :**

ತಾಜ್ ಬಾವಡಿ ಐತಿಹಾಸಿಕ ಜಲಸಂಗ್ರಹಾಗಾರವನ್ನು ಆದಿಲ್ ಶಾಹಿ ರಾಜವಂಶದ ಪ್ರಸಿದ್ಧ ದೊರೆ ಎರಡನೇ ಇಬ್ರಾಹಿಂ ಆದಿಲ್ ಷಾ ತನ್ನ ಪ್ರೀತಿಯ ಹೆಂಡತಿಯಾದ ರಾಣಿ ತಾಜ್ ಸುಲ್ತಾನಾಳ ಗೌರವಾರ್ಥವಾಗಿ ಸಾ.ಶ. 1620 ರಲ್ಲಿ ನಿರ್ಮಿಸಿದನು. ಅರಸರ ಕಾಲದಲ್ಲಿ ನಗರದ ಜನರಿಗೆ ಮತ್ತು ಪ್ರವಾಸಿಗರಿಗೆ ಸುಸ್ಥಿರವಾಗಿ ಕುಡಿಯುವ ನೀರನ್ನು ಪೂರೈಸುವ ಮುಖ್ಯ ಜಲಸಂಗ್ರಹಾಗಾರವಾಗಿ ಮತ್ತು ಇದರ ಕಾರಿಡಾರ್‌ಗಳು ತಂಗುದಾಣವಾಗಿ ಬಳಕೆಯಲ್ಲಿದ್ದವು. **ಈ** ಐತಿಹಾಸಿಕ 'ತಾಜ್ ಬಾವಡಿ'ಯನ್ನು "ರಾಜ್ಯ ಸಂರಕ್ಷಿತ ಸ್ಮಾರಕ" ಎಂದು ಸರ್ಕಾರದ ಅಧಿಸೂಚನೆ ಸಂಖ್ಯೆ: ಕಸಂವಾಪ:150:ಕೆಎಂಯು:2011, ದಿನಾಂಕ: 22.05.2014ರಲ್ಲಿ ಘೋಷಿಸಲಾಗಿದೆ.

ನಗರೀಕರಣ ಮತ್ತು ಸೂಕ್ತ ನಿರ್ವಹಣೆಯ ಕೊರತೆಯಿಂದಾಗಿ ಶಿಥಿಲಗೊಂಡಿದ್ದ ಸ್ಮಾರಕದ ಸಂರಕ್ಷಣೆ ಮತ್ತು ಕಲುಷಿತಗೊಂಡ ನೀರನ್ನು ಶುದ್ಧಿಕರಣಗೊಳಿಸಿ ಪುನರ್‌ಜೀವನಗೊಳಿಸಲು 'ವರ್ಲ್ಡ್ ಮಾನ್ಯುಮೆಂಟ್ಸ್ ಫಂಡ್' (World Monuments Fund) ಸಂಸ್ಥೆಯು ದತ್ತು ಪಡೆದು ವಿಜಯಪುರ ಜಿಲ್ಲಾಡಳಿತ, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರ ಇಲಾಖೆ ಸಹಯೋಗದೊಂದಿಗೆ 'ಡೆಕ್ಕನ್ ಹೆರಿಟೇಜ್ ಫೌಂಡೇಶನ್' ಸಂಸ್ಥೆಯ PMC ಸಹಕಾರದೊಂದಿಗೆ ಬಾವಡಿಯಲ್ಲಿದ್ದ ಹೂಳು, ಕಸ ಹಾಗೂ ಕಲುಷಿತ ನೀರಿನ ಸಂಪೂರ್ಣ ತೆರವು, ಕಲ್ಲಿನ ಗೋಡೆಗಳ ಸಸ್ಯವರ್ಗದ ನಾಶ, ಪ್ರವೇಶ ದ್ವಾರ, ಕಮಾನುಗಳು ಹಾಗೂ ಮೆಟ್ಟಿಲುಗಳ ರಚನಾತ್ಮಕ ದುರಸ್ತಿ, ಆವರಣದಲ್ಲಿದ್ದ ಅತಿಕ್ರಮಣಗಳ ತೆರವು, ಮೇಲ್ಛಾವಣಿಯ ಜಲನಿರೋಧಕ (Waterproofing) ವ್ಯವಸ್ಥೆ ಮತ್ತು ತಂತಿಬೇಲಿ (Fencing)

ನಿರ್ಮಾಣದ ಕೆಲಸಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಪ್ರಸ್ತುತ ಪ್ರವಾಸಿ ಮೂಲಸೌಕರ್ಯ ಹಾಗೂ ವಿದ್ಯುದ್ದೀಕರಣದ (Electrification) ಕೆಲಸಗಳು ಪ್ರಗತಿಯಲ್ಲಿವೆ. ಈ ದತ್ತು ಯೋಜನೆಯಡಿ ಎಲ್ಲಾ ಮೂಲಸೌಕರ್ಯ ಕಾಮಗಾರಿಗಳು ಪೂರ್ಣಗೊಂಡ ತಕ್ಷಣವೇ ಆಗಸ್ಟ್ 2026ರ ಅಂತ್ಯಕ್ಕೆ ಸಂಸ್ಥೆಯು ಸ್ಮಾರಕವನ್ನು ಮರಳಿ ಇಲಾಖೆಗೆ ಹಸ್ತಾಂತರಿಸಲಿದೆ.

ಈ ಐತಿಹಾಸಿಕ ತಾಜ್ ಬಾವಡಿ ಸ್ಮಾರಕವು ವಿಜಯಪುರ ಜಿಲ್ಲೆಯಲ್ಲಿ ಪ್ರಮುಖ ಆಕರ್ಷಿಯ ಪ್ರವಾಸಿ ತಾಣಗಳ ಪಟ್ಟಿಗೆ ಸೇರ್ಪಡೆಗೊಳ್ಳಲಿದೆ.

**ಆನಂದ್ ಮಹಲ್ ಸ್ಮಾರಕ**

ಕರ್ನಾಟಕದ ವಿಜಯಪುರ (ಹಳೆಯ ಬಿಜಾಪುರ) ನಗರದಲ್ಲಿರುವ ಆದಿಲ್ ಶಾಹಿ ರಾಜವಂಶದ ಕಾಲದ ಒಂದು ಅತ್ಯಂತ ಪ್ರಮುಖ ಹಾಗೂ ಸುಂದರವಾದ ಐತಿಹಾಸಿಕ ಅರಮನೆಯಾಗಿದೆ ಇದನ್ನು ಕ್ರಿ.ಶ. 1589 ರಲ್ಲಿ ಆದಿಲ್ ಶಾಹಿ ರಾಜವಂಶದ ಪ್ರಸಿದ್ಧ ದೊರೆ ಎರಡನೇ ಇಬ್ರಾಹಿಂ ಆದಿಲ್ ಶಾ (Ibrahim Adil Shah II) ನಿರ್ಮಿಸಿದನು. ಅರಮನೆಗಳ ಸಂತೋಷ' (Palace of Delights) ಎಂದೂ ಕರೆಯಲಾಗುತ್ತಿತ್ತು. ಇದು ಮುಖ್ಯವಾಗಿ ರಾಜಮನೆತನದ ಮಹಿಳೆಯರ ನಿವಾಸವಾಗಿ ಬಳಕೆಯಾಗುತ್ತಿತ್ತು. ಇದು ಭಾರತೀಯ ಮತ್ತು ಇಸ್ಲಾಮಿಕ್ ಶೈಲಿಗಳ ಸಮ್ಮಿಲನವಾದ ಇಂಡೋ-ಇಸ್ಲಾಮಿಕ್ ವಾಸ್ತುಶಿಲ್ಪಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಎರಡು ಮಹಡಿಗಳ ಈ ಭವ್ಯ ಅರಮನೆಯ ಮುಂಭಾಗದಲ್ಲಿ ವಿಶಾಲವಾದ ಪ್ರಾಂಗಣವಿದ್ದು, ಎರಡೂ ಕಡೆಗಳಿಂದ ಹತ್ತಿ ಆಕರ್ಷಕವಾದ ಮೆಟ್ಟಿಲುಗಳ ಸಾಲನ್ನು ಹೋಗಲು ನಿರ್ಮಿಸಲಾಗಿದೆ.

ಪ್ರವಾಸೋದ್ಯಮ ಇಲಾಖೆಯ ರೂ.5 ಕೋಟಿ ಅನುದಾನದಲ್ಲಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವತಿಯಿಂದ ಈ ಸ್ಮಾರಕವನ್ನು ಸಂರಕ್ಷಿಸಲಾಗಿದೆ. ವಿಜಯಪುರ ಜಿಲ್ಲೆಯ ಶ್ರೀಮಂತ ಕಲೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುವ ಆಕರ್ಷಕ ಮತ್ತು ಸಂವಾದಾತ್ಮಕವಾಗಿ ವಿಜಯಪುರ ಜಿಲ್ಲಾ ಸರ್ಕಾರಿ ವಸ್ತುಸಂಗ್ರಹಾಲಯವನ್ನಾಗಿ ಪರಿವರ್ತಿಸಿ ಅಭಿವೃದ್ಧಿಪಡಿಸಲು ಕಂದಾಯ ಇಲಾಖೆಯು ಅನುಮತಿ ನೀಡಿದೆ.

**ಬಾಗಲಕೋಟೆ ಜಿಲ್ಲೆ**

ಬಾಗಲಕೋಟೆ ಜಿಲ್ಲೆಯ ಬಾದಾಮಿ ಗುಹಾಂತರ ದೇವಾಲಯಗಳು, ಯುನೆಸ್ಕೋ ಪರಂಪರೆಯ ತಾಣವಾದ ಪಟ್ಟದಕಲ್ಲು, ಭಾರತೀಯ ವಾಸ್ತುಶಿಲ್ಪದ ತೊಟ್ಟಿಲು ಎಂದೇ ಪ್ರಸಿದ್ಧವಾದ ಐಹೊಳೆ ಕೂಡಲಸಂಗಮ, ಮಹಾಕೂಟ ಮತ್ತು ಬನಶಂಕರಿ ದೇವಾಲಯಗಳು ಪ್ರವಾಸಿ ತಾಣಗಳಾಗಿವೆ.

**ಐಹೊಳೆ ಗ್ರಾಮದ ಪುನರ್ವಸತಿ ಯೋಜನೆ:**

ಐಹೊಳೆಯ 8 ಐತಿಹಾಸಿಕ ಸ್ಮಾರಕಗಳಲ್ಲಿ ಮತ್ತು ಸ್ಮಾರಕಕ್ಕೆ ಹೊಂದಿಕೊಂಡಂತೆ ವಾಸಿಸುತ್ತಿರುವ 134 ಕುಟುಂಬಗಳನ್ನು ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲು 13.11 ಎಕರೆ ಜಮೀನನ್ನು ರೂ.3.50 ಕೋಟಿಗಳ ವೆಚ್ಚದಲ್ಲಿ ಖರೀದಿಸಲಾಗಿದೆ.

**ಅಭಿವೃದ್ಧಿ ಅನುದಾನ:** ಐಹೊಳೆ ಗ್ರಾಮದಲ್ಲಿ 8 ಸ್ಮಾರಕಗಳಲ್ಲಿ ವಾಸವಾಗಿರುವ 134 ಕುಟುಂಬಗಳ ಪುನರ್ವಸತಿ ಕಲ್ಪಿಸಲು ಖರೀದಿಸಲಾಗಿರುವ 13.11 ಎಕರೆ ಜಮೀನಿನಲ್ಲಿ ವಸತಿ ವಿನ್ಯಾಸ ರಚನೆ ಮತ್ತು ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಟಿಒಆರ್ 58 ಟಿಡಿಎ 2024, ದಿನಾಂಕ:17/01/2025 ರಲ್ಲಿ ಕರ್ನಾಟಕ ರಾಜ್ಯ ಹ್ಯಾಬಿಟೇಟ್ ಕೇಂದ್ರ ಬೆಂಗಳೂರು, ಇವರು ಸಲ್ಲಿಸಿರುವ ಅಂದಾಜಿನ ಪ್ರಕಾರ ಬಡಾವಣೆ ರಚನೆ ಕಾಮಗಾರಿಗಳನ್ನು ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ ಬಾಗಲಕೋಟೆ ಇವರ ವತಿಯಿಂದ ಅನುಷ್ಠಾನಗೊಳಿಸಲು ಅನುಮತಿ ನೀಡಿ ಆದೇಶಿಸಿದೆ. ಮೂಲಸೌಕರ್ಯಕ್ಕಾಗಿ ರೂ. 799.10 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿದೆ.

**ಸ್ಮಾರಕಗಳ ಸಂರಕ್ಷಣೆ ಒಪ್ಪಂದ:** ಕುಟುಂಬಗಳ ಸ್ಥಳಾಂತರದ ನಂತರ, ಸುಮಾರು ರೂ. 8-10 ಕೋಟಿ ವೆಚ್ಚದಲ್ಲಿ 8 ಸ್ಮಾರಕಗಳ ಸಂರಕ್ಷಣೆಯನ್ನು ಕೈಗೊಳ್ಳಲು ಸರ್ಕಾರ (40%), ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ (40%) ಮತ್ತು ಸ್ಥಳೀಯ ಸಂಸ್ಥೆಗಳ ಜಂಟಿ ವಂತಿಗೆಯೊಂದಿಗೆ 05/03/2024 ರಂದು ತ್ರಿಪಕ್ಷೀಯ ಒಪ್ಪಂದ ಮಾಡಿಕೊಳ್ಳಲಾಗಿದೆ.

ಈ ಯೋಜನೆಗಳು ಪೂರ್ಣಗೊಂಡಲ್ಲಿ ಐಹೊಳೆಯ ಐತಿಹಾಸಿಕ ವೈಭವದ ಮರುಸ್ಥಾಪನೆಗೊಂಡು ಚಾಲುಕ್ಯರ ವಾಸ್ತುಶಿಲ್ಪದ ಮೂಲ ಸೌಂದರ್ಯ ಮರುಕಳಿಸಲಿದೆ. ಅಲ್ಲದೆ ಐಹೊಳೆ-ಬಾದಾಮಿ-ಪಟ್ಟದಕಲ್ಲು ವಲಯಕ್ಕೆ ಯುನೆಸ್ಕೋ ಜಾಗತಿಕ ಪರಂಪರೆಯ ತಾಣದ (World Heritage Site) ಪೂರ್ಣ ಪ್ರಮಾಣದ ಮಾನ್ಯತೆ ಸಿಗುವ ಸಾಧ್ಯತೆಗಳು ಹೆಚ್ಚಾಗುತ್ತವೆ. ಅಂತರರಾಷ್ಟ್ರೀಯ ಮಟ್ಟದ ಪ್ರವಾಸೋದ್ಯಮ ಅಭಿವೃದ್ಧಿ ಮತ್ತು ಸುಸಜ್ಜಿತ ಪ್ರವಾಸಿ ಸೌಲಭ್ಯಗಳು ದೇಶ-ವಿದೇಶಗಳ ಪ್ರವಾಸಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲಿವೆ.

**ಸಂಖ್ಯೆ: ಟಿಓಆರ್ 170 ಟಿಡಿವಿ 2026**

**(ಕೆ.ಜೆ. ಜಾರ್ಜ್)**
ಇಂಧನ ಹಾಗೂ ಪ್ರವಾಸೋದ್ಯಮ ಸಚಿವರು.

**ಶ್ರೀ ನಿರಾಣಿ ಹಣಮಂತ ರುದ್ರಪ್ಪ , ಮಾನ್ಯ ವಿಧಾನ ಪರಿಷತ್ ಸದಸ್ಯರು ರವರು ಕೇಳಿರುವ ನಿಯಮ 330 ರಡಿಯಲ್ಲಿ ಕೋರಿರುವ ಮಾಹಿತಿಗೆ ಅನುಬಂಧ -1**

| ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಪ್ರವಾಸಿ ತಾಣದ ಹೆಸರು | ಪ್ರವಾಸಿ ತಾಣಗಳ ಸಂಖ್ಯೆ |
|---|---|---|---|
| ಬಾಗಲಕೋಟೆ | ಬಾಗಲಕೋಟೆ | ಮುಚಖಂಡಿ ಕೆರೆ, | 6 |
| | | ಸಿಮಿಕೇರಿ-ಲಡ್ಡುಮುತ್ಯಾ. | |
| | | ತುಳಸಿಗೇರಿ | |
| | | ಕಲಾದಗಿ | |
| | | ಹಳ್ಳೂರು | |
| | | ಶಿರೂರು | |
| | ಹುನಗುಂದ | ಐಹೊಳೆ | 3 |
| | | ಕೂಡಲಸಂಗಮ | |
| | | ಸಿದ್ದನಕೊಳ್ಳ | |
| | ಬಾದಾಮಿ. | ಬಾದಾಮಿ. | 6 |
| | | ಬನಶಂಕರಿ | |
| | | ಶಿವಯೋಗ ಮಂದಿರ | |
| | | ಪಟ್ಟದಕಲ್ಲು. | |
| | | ಮಹಾಕೂಟ | |
| | | ಹುಲಿಗೆಮ್ಮನಕೊಳ್ಳ | |
| | ಬೀಳಗಿ | ಚಿಕ್ಕಸಂಗಮ | 4 |
| | | ಕಪ್ಪರಪಡಿಯಮ್ಮ | |
| | | ಹೆರಕಲ್ | |
| | | ಯಡಹಳ್ಳಿ ಚಿಂಕಾರ ವನ್ಯಜೀವಿಧಾಮ | |
| | ಜಮಖಂಡಿ | ಕಟ್ಟಿಕೆರೆ | 3 |
| | | ಜಮಖಂಡಿ | |
| | | ಶೂರ್ಪಾಲಿ | |
| | ಮುಧೋಳ | ರನ್ನಬೆಳಗಲಿ | 2 |
| | | ಮಂಟೂರು | |
| | ರಬಕವಿ ಬನಹಟ್ಟಿ | ಮಹಾಲಿಂಗಪೂರ | 2 |
| | | ತೇರದಾಳ | |
| | ಗುಳೇದಗುಡ್ಡ | ದಿಡಗ್ (ಗುಳೇದಗುಡ್ಡ) ಜಲಪಾತ್ | 1 |
| | ಇಲಕಲ್ | ದಮ್ಮೂರು ಜಲಪಾತ | 1 |
| | | **ಬಾಗಲಕೋಟೆ ಜಿಲ್ಲೆ ಒಟ್ಟು** | **28** |

| ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಪ್ರವಾಸಿ ತಾಣದ ಹೆಸರು | ಪ್ರವಾಸಿ ತಾಣಗಳ ಸಂಖ್ಯೆ |
|---|---|---|---|
| ವಿಜಯಪುರ | ವಿಜಯಪುರ | ಗೋಲಗುಮ್ಮಟ, ವಿಜಯಪುರ ನಗರ | 7 |
| | | ಇಬ್ರಾಹಿಂ ರೋಜಾ ವಿಜಯಪುರ ನಗರ - | |
| | | ಶ್ರೀ ವಾಗ್ದೇವಿ ದೇವಸ್ಥಾನ ದ್ಯಾಬೇರಿ ಗ್ರಾಮ | |
| | | ಬೇಸಿಗೆ ಅರಮನೆ -ಕುಮಟಗಿ ಗ್ರಾಮ | |
| | | ಸಾರಿಪುತ್ರ ಬೋಧಿದಮ್ಮ ಬೌದ್ಧ ವಿಹಾರ | |
| | | ಶ್ರೀ ಗುರು ಚಕ್ರವರ್ತಿ ಸದಾಶಿವ ಶಿವಯೋಗಿ ಮಠ ಸಾ: ಕತ್ನಳ್ಳಿ /ಕತಕನಹಳ್ಳಿ | |
| | | ಶಿವನಮೂರ್ತಿ ಶಿವಗಿರಿ | |
| | ತಿಕೋಟ | ಶ್ರೀ ನರಸಿಂಹ ದೇವಸ್ಥಾನ ತೊರವಿ ಗ್ರಾಮ | 6 |
| | | ಸಂಗೀತ ಮಹಲ, ತೊರವಿ ಗ್ರಾಮ | |
| | | ಶ್ರೀ ಲಕ್ಷ್ಮೀ ದೇವಸ್ಥಾನ ತೊರವಿ ಗ್ರಾಮ | |
| | | ಶ್ರೀ ದರಿದೇವರ ದೇವಸ್ಥಾನ, ಕನಮಡಿ ಗ್ರಾಮ | |
| | | ಶ್ರೀ ಅಮೋಘಸಿದ್ಧ ದೇವಸ್ಥಾನ, ಜಾಲಗೇರಿ ಮುಮ್ಮಟ ಗುಡ್ಡ-ಅರಕೇರಿ ಗ್ರಾಮ | |
| | | ಹಾಜಿಮಸ್ತಾನ ದರ್ಗಾ, ತಿಕೋಟ | |
| | ಬಬಲೇಶ್ವರ | ಶ್ರೀ ಸಂಗಮನಾಥ ದೇವಸ್ಥಾನ ಉಪ್ಪಲದಿನ್ನಿ | 2 |
| | | ಶ್ರೀ ಹರಳಯ್ಯನ ಗುಂಡ ಶೇಗುಣಸಿ | |
| | ಬಸವನ ಬಾಗೇವಾಡಿ | ಶ್ರೀ ಬಸವೇಶ್ವರ ದೇವಸ್ಥಾನ, ಬಸವನ ಬಾಗೇವಾಡಿ | 2 |
| | | ಶ್ರೀ ಜಗಜ್ಯೋತಿ ಬಸವೇಶ್ವರ ರವರ ಜನ್ಮಸ್ಥಳ - ಇಂಗಳೇಶ್ವರ ಗ್ರಾಮ | |
| | ನಿಡಗುಂದಿ | ಲಾಲ ಬಹದ್ದೂರ ಶಾಸ್ತ್ರಿ ಆಣೆಕಟ್ಟು ಆಲಮಟ್ಟಿ ಗ್ರಾಮ | 1 |
| | ಮುದ್ದೇಬಿಹಾಳ | ಶ್ರೀ ಯಲಗೂರೇಶ್ವರ ಆಂಜನೇಯ ದೇವಸ್ಥಾನ ಯಲಗೂರು ಗ್ರಾಮ | 4 |
| | | ಶ್ರೀ ನೀಲಾಂಬಿಕೆ ರವರ ದೇವಸ್ಥಾನ ಹಾಗೂ ಯುದ್ಧಭೂಮಿ, ತಂಗಡಗಿ ಗ್ರಾಮ | |
| | | ಶ್ರೀ ಕೊಟ್ಟೂರು ಬಸವೇಶ್ವರ ದೇವಸ್ಥಾನ, ಕೋಳುರು ಗ್ರಾಮ | |
| | | ಶ್ರೀ ಈಶ್ವರಲಿಂಗ ದೇವಸ್ಥಾನ, ಕೋಳುರು ಗ್ರಾಮ | |
| | ಇಂಡಿ | ಶ್ರೀ ರೇವಣ ಸಿದ್ಧೇಶ್ವರ ದೇವಸ್ಥಾನ, ಹೋರ್ತಿ ಗ್ರಾಮ, | 5 |
| | | ಶ್ರೀ ಜಟ್ಟೆಂಗೇಶ್ವರ ದೇವಸ್ಥಾನ, ಹಿರೇರೂಗಿ ಗ್ರಾಮ, | |
| | | ಶ್ರೀ ಶಿವಯೋಗೇಶ್ವರ ದೇವಸ್ಥಾನ, ಸಾಲೋಟಗಿ ಗ್ರಾಮ | |
| | | ಶ್ರೀ ಪೃಥುಲಿಂಗೇಶ್ವರ ದೇವಸ್ಥಾನ, ಹಲಸಂಗಿ ಗ್ರಾಮ | |
| | | ಶ್ರೀ ಸಿದ್ಧಲಿಂಗ ಮಹಾರಾಜರ ಮಠ ಸಾ: ಲಚ್ಯಾಣ | |
| | ಸಿಂದಗಿ | ಶ್ರೀ ದವಲ ಮಲೀಕ ದರ್ಗಾ, ಯಂಕಂಚಿ ಗ್ರಾಮ, | 1 |
| | ದೇವರ ಹಿಪ್ಪರಗಿ | ಶ್ರೀ ದತ್ತಾತ್ರೇಯ ದೇವಸ್ಥಾನ, ಚಟ್ಟರಕಿ ಗ್ರಾಮ, | 4 |
| | | ಶ್ರೀ ಸೋಮೇಶ್ವರ ದೇವಸ್ಥಾನ -ಕಡ್ಲೆವಾಡ ಗ್ರಾಮ | |
| | | ಶ್ರೀ ಮಲ್ಲಯ್ಯಾ ದೇವಸ್ಥಾನ ಹಾಗೂ ಶ್ರೀ ಕಲ್ಮೇಶ್ವರ ದೇವಸ್ಥಾನ, ದೇವರ ಹಿಪ್ಪರಗಿ | |
| | | ಶ್ರೀ ಮಡಿವಾಳ ಮಾಚಿದೇವರ ದೇವಸ್ಥಾನ ಸಾ: ದೇವರ ಹಿಪ್ಪರಗಿ, | |
| | ಚಡಚಣ | ಶ್ರೀ ಶಂಕರಲಿಂಗ ದೇವಸ್ಥಾನ ಸಾ: ದೂಳಖೇಡ | 1 |
| | | **ವಿಜಯಪುರ ಜಿಲ್ಲೆ ಒಟ್ಟು** | **33** |
| | | **ಗ್ರಾಂಡ್ ಟೋಟಲ್** | **61** |

ಅನುಬಂಧ - 02

**2024-25ನೇ ಸಾಲಿಗೆ ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಿಗೆ ಸಂಬಂಧಿಸಿದಂತೆ ವಿವಿಧ ತರಬೇತಿಗಳಿಗೆ ನಿಗಧಿಪಡಿಸಿರುವ ಗುರಿ ಮತ್ತು ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ**

**MULTI CUISINE COOK**

| ಕ್ರ.ಸಂ | ಜಿಲ್ಲೆಯ ಹೆಸರು | ನಿಗಧಿಪಡಿಸಿರುವ ಗುರಿ | | | ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ | | |
|---|---|---|---|---|---|---|---|
| | | SC | ST | ಒಟ್ಟು | SC | ST | ಒಟ್ಟು |
| 1 | ವಿಜಯಪುರ | 4 | 2 | 6 | 7 | 3 | 10 |
| 2 | ಬಾಗಲಕೋಟೆ | 2 | 2 | 4 | 1 | 3 | 4 |
| | ಒಟ್ಟು | 6 | 4 | 10 | 8 | 6 | 14 |

**Food & Bewerage Service Steward**

| ಕ್ರ.ಸಂ | ಜಿಲ್ಲೆಯ ಹೆಸರು | ನಿಗಧಿಪಡಿಸಿರುವ ಗುರಿ | | | ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ | | |
|---|---|---|---|---|---|---|---|
| | | SC | ST | ಒಟ್ಟು | SC | ST | ಒಟ್ಟು |
| 1 | ವಿಜಯಪುರ | 3 | 2 | 5 | 1 | 2 | 3 |
| 2 | ಬಾಗಲಕೋಟೆ | 2 | 2 | 4 | 0 | 2 | 2 |
| | ಒಟ್ಟು | 5 | 4 | 9 | 1 | 4 | 5 |

**Room Attendant**

| ಕ್ರ.ಸಂ | ಜಿಲ್ಲೆಯ ಹೆಸರು | ನಿಗಧಿಪಡಿಸಿರುವ ಗುರಿ | | | ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ | | |
|---|---|---|---|---|---|---|---|
| | | SC | ST | ಒಟ್ಟು | SC | ST | ಒಟ್ಟು |
| 1 | ವಿಜಯಪುರ | 1 | 1 | 2 | 1 | 1 | 2 |
| 2 | ಬಾಗಲಕೋಟೆ | 1 | 0 | 1 | 0 | 0 | 0 |
| | ಒಟ್ಟು | 2 | 1 | 3 | 1 | 1 | 2 |

**Front office Associate**

| ಕ್ರ.ಸಂ | ಜಿಲ್ಲೆಯ ಹೆಸರು | ನಿಗಧಿಪಡಿಸಿರುವ ಗುರಿ | | | ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ | | |
|---|---|---|---|---|---|---|---|
| | | SC | ST | ಒಟ್ಟು | SC | ST | ಒಟ್ಟು |
| 1 | ವಿಜಯಪುರ | 1 | 0 | 1 | 1 | 0 | 1 |
| 2 | ಬಾಗಲಕೋಟೆ | 1 | 0 | 1 | 0 | 0 | 0 |
| | ಒಟ್ಟು | 2 | 0 | 2 | 1 | 0 | 1 |

**2024-25ನೇ ಸಾಲಿಗೆ ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಿಗೆ Entrepreneurship Training (EP) ತರಬೇತಿ ಹಾಗೂ ಮೊಬೈಲ್ ಕ್ಯಾಂಟೀನ್ ವಾಹನ ಖರೀದಿಗೆ ನಿಗಧಿಪಡಿಸಿರುವ ಗುರಿ/ತರಬೇತಿಗೆ ಹಾಜರಾದ ಅಭ್ಯರ್ಥಿಗಳ ಸಂಖ್ಯೆ.**

| ಕ್ರ.ಸಂ | ಜಿಲ್ಲೆ | ನಿಗಧಿಪಡಿಸಿರುವ ಗುರಿ | | | ಫಲಾನುಭವಿಗಳ ಸಂಖ್ಯೆ | | |
|---|---|---|---|---|---|---|---|
| | | ಪ.ಜಾ | ಪ.ಪಂ | ಒಟ್ಟು | ಪ.ಜಾ | ಪ.ಪಂ | ಒಟ್ಟು |
| 1 | ವಿಜಯಪುರ | 5 | 2 | 7 | 5 | 2 | 7 |
| 2 | ಬಾಗಲಕೋಟೆ | 6 | 6 | 12 | 6 | 6 | 12 |
| | ಒಟ್ಟು | **11** | **8** | **19** | **11** | **8** | **19** |

**2025-26ನೇ ಸಾಲಿಗೆ ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಿಗೆ ಮೊಬೈಲ್ ಕ್ಯಾಂಟೀನ್ ವಾಹನ ಖರೀದಿಗೆ ನಿಗಧಿಪಡಿಸಿರುವ ಗುರಿ**

| ಕ್ರ.ಸಂ | ಜಿಲ್ಲೆ | ನಿಗಧಿಪಡಿಸಿರುವ ಗುರಿ | | | ಅಭ್ಯರ್ಥಿಗಳ ಸಂಖ್ಯೆ | | | |
|---|---|---|---|---|---|---|---|---|
| | | ಪ.ಜಾ | ಪ.ಪಂ | ಒಟ್ಟು | ಪ.ಜಾ | ಪ.ಪಂ | ಒಟ್ಟು | ಷರಾ |
| 1 | ವಿಜಯಪುರ | 7 | 5 | 12 | 7 | 5 | 12 | |
| 2 | ಬಾಗಲಕೋಟೆ | 4 | 3 | 7 | 4 | 3 | 7 | |
| | ಒಟ್ಟು | **11** | **8** | **19** | **11** | **8** | **19** | ಜಿಲ್ಲಾ ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ |

# ಶ್ರೀ ನಿರಾಣಿ ಹಣಮಂತ ರುದ್ರಪ್ಪ, ಮಾನ್ಯ ವಿಧಾನಪರಿಷತ್ ಸದಸ್ಯರು ರವರು ನಿಯಮ 330 ರಡಿಯಲ್ಲಿ ಕೋರಿರುವ ಮಾಹಿತಿಗೆ ಅನುಬಂಧ -3

**ಲೆಕ್ಕಶೀರ್ಷಿಕೆ 5452-01-101-0-01-132- ವಿವಿಧ ಸ್ಥಳಗಳಲ್ಲಿ ಪ್ರವಾಸೋದ್ಯಮ ಮೂಲಭೂತ ಸೌಕರ್ಯ- ಬಂಡವಾಳ ವೆಚ್ಚಗಳ ಅಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳಿಗೆ ಕಳೆದ 03 ವರ್ಷಗಳಿಂದ ಬಿಡುಗಡೆ ಮಾಡಿರುವ ಅನುದಾನದ ವಿವರ**

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಬಿಡುಗಡೆ ಮಾಡಿರುವ ಅನುದಾನ | | | | ಬಾಕಿ | ಷರಾ |
|---|---|---|---|---|---|---|---|---|---|
| | | | | ಮಾರ್ಚ್ 2023 ರ ಅಂತ್ಯದ ವರೆಗೆ ಬಿಡುಗಡೆ ಮಾಡಿರುವ ಅನುದಾನ | 2023-24 | 2024-25 | 2025-26 | | |
| 1 | 2 | 3 | 4 | 5 | 6 | 7 | 8 | 9 | 10 |
| | **ವಿಜಯಪುರ ಜಿಲ್ಲೆ** | | | | | | | | |
| | **ವಿಜಯಪುರ ತಾಲ್ಲೂಕು** | | | | | | | | |
| 1 | ವಿಜಯಪುರ ತಾಲ್ಲೂಕಿನ ಕನಮಡಿ ಗ್ರಾಮದ ಧರಿದೇವರ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ನಿರ್ಮಾಣ. | 100.00 | ಕೆಆರ್ಐಡಿಎಲ್ | 70.00 | 0.00 | 0.00 | 0.00 | 30.00 | ಪ್ರಗತಿಯಲ್ಲಿದೆ |
| 2 | ವಿಜಯಪುರ ನಗರದ ಹೃದಯ ಭಾಗದಲ್ಲಿರುವ ಗಗನಮಹಲ್ ಕಂದಕ ಪ್ರದೇಶವನ್ನು ಅಭಿವೃದ್ಧಿಪಡಿಸಿ ಬೋಟಿಂಗ್ ವ್ಯವಸ್ಥೆ ಕಲ್ಪಿಸುವ ಕಾಮಗಾರಿ | 150.00 | ಕೆ.ಟಿ.ಐ.ಎಲ್ | 0.00 | 0.00 | 0.00 | 0.00 | 150.00 | ಅಂದಾಜು ಪಟ್ಟಿ ಮತ್ತು ನಕ್ಷೆ ಸಲ್ಲಿಸುವಂತೆ ಅನುಷ್ಠಾನ ಸಂಸ್ಥೆ ರವರಿಗೆ ಪತ್ರ ಬರೆಯಲಾಗಿದೆ. |
| | **ಬಸವನ ಬಾಗೇವಾಡಿ ತಾಲ್ಲೂಕು** | | | | | | | | |
| 3 | ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ಪ್ರವಾಸಿ ಕೇಂದ್ರದ ಡಾ.ಬಿ.ಆರ್ ಅಂಬೇಡ್ಕರ್ ವೃತ್ತದಿಂದ ಯಾತ್ರಿನಿವಾಸದವರೆಗೆ ರೂ.25.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿ | 25.00 | ಕೆ.ಆರ್.ಐ.ಡಿ.ಎಲ್ | 0.00 | 8.00 | 0.00 | 0.00 | 17.00 | ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. |
| | **ಮುದ್ದೇಬಿಹಾಳ ತಾಲ್ಲೂಕು** | | | | | | | | |
| 4 | ವಿಜಯಪುರ ಜಿಲ್ಲೆ ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರ ಸರೂರು ಗ್ರಾಮದ ಶ್ರೀ ರೇವಣಸಿದ್ಧೇಶ್ವರ ಗುರುಮಠ ಹತ್ತಿರ ಯಾತ್ರಿನಿವಾಸ ನಿರ್ಮಾಣ | 100.00 | ನಿರ್ಮಿತಿ ಕೇಂದ್ರ | 90.00 | 0.00 | 10.00 | 0.00 | 0.00 | ಪೂರ್ಣಗೊಂಡಿದೆ |
| | **ಸಿಂಧಗಿ ತಾಲ್ಲೂಕು** | | | | | | | | |
| 5 | ಸಿಂದಗಿ ನಗರದ ಬಸವ ಮಂಟಪ ಆವರಣದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ | 25.00 | ಕೆ.ಟಿ.ಐ.ಎಲ್ | 0.00 | 0.00 | 0.00 | 0.00 | 25.00 | ಪರಿಷ್ಕೃತ ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. |
| 6 | ಸಿಂದಗಿಯ ಬೊಮ್ಮನಹಳ್ಳಿ ಗ್ರಾಮದ ಹಿರೇಮಠದ ಆವರಣದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ | 25.00 | ಕೆ.ಟಿ.ಐ.ಎಲ್ | 0.00 | 0.00 | 0.00 | 0.00 | 25.00 | ಪರಿಷ್ಕೃತ ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. |

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಬಿಡುಗಡೆ ಮಾಡಿರುವ ಅನುದಾನ | | | | ಬಾಕಿ | ಷರಾ |
|---|---|---|---|---|---|---|---|---|---|
| | | | | ಮಾರ್ಚ್ 2023 ರ ಅಂತ್ಯದ ವರೆಗೆ ಬಿಡುಗಡೆ ಮಾಡಿರುವ ಅನುದಾನ | 2023-24 | 2024-25 | 2025-26 | | |
| 1 | 2 | 3 | 4 | 5 | 6 | 7 | 8 | 9 | 10 |
| 7 | ಸಿಂದಗಿಯ ಖೈನೂರ ಗ್ರಾಮದ ಶ್ರೀ ಭಗೀರಥ ಭವನದ ಆವರಣದಲ್ಲಿಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ | 25.00 | ಕೆ.ಟಿ.ಐ.ಎಲ್ | 0.00 | 0.00 | 0.00 | 0.00 | 25.00 | ಪರಿಷ್ಕೃತ ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿ ರವರಿಗೆ ಪತ್ರ ಬರೆಯಲಾಗಿದೆ. |
| | **ವಿಜಯಪುರ ಜಿಲ್ಲೆಯ ಒಟ್ಟು** | **450.00** | | **160.00** | **8.00** | **10.00** | **0.00** | **272.00** | |
| | **ಬಾಗಲಕೋಟೆ ಜಿಲ್ಲೆ** | | | | | | | | |
| | **ಬಾಗಲಕೋಟೆ ತಾಲ್ಲೂಕು** | | | | | | | | |
| 8 | ಬಾಗಲಕೋಟೆ ತಾಲ್ಲೂಕಿನ ಸಿಮಿಕೇರಿ ಗ್ರಾಮದ ಲಡ್ಡುಮುತ್ಯಾ ಕ್ಷೇತ್ರದ ಬಳಿ 12 ಹಾಸಿಗೆಗಳ 4 ಡಾರ್ಮಿಟರಿ ಹಾಗೂ ಶೌಚಾಲಯದ ಸೌಲಭ್ಯಗಳ ನಿರ್ಮಾಣ. (ಮೂಲ ಅಂದಾಜು ಮೊತ್ತ ರೂ.124.01 ಲಕ್ಷಗಳು) | 154.79 | ಪ್ರವಾಸೋದ್ಯಮ ಇಲಾಖೆ | 126.20 | 0.00 | 28.59 | 0.00 | 0.00 | ಪೂರ್ಣಗೊಂಡಿದೆ |
| 9 | ಬಾಗಲಕೋಟೆ ತಾಲ್ಲೂಕಿನ ಯಡಹಳ್ಳಿ ಶ್ರೀ ಅಜಾತ ನಾಗಲಿಂಗೇಶ್ವರ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ. | 27.37 | ಕೆಆರ್ಐಡಿಎಲ್ | 25.00 | 0.00 | 0.00 | 2.37 | 0.00 | ಪೂರ್ಣಗೊಂಡಿದೆ |
| | **ಬೀಳಗಿ ತಾಲ್ಲೂಕು** | | | | | | | | |
| 10 | ಬೀಳಗಿ ತಾಲ್ಲೂಕಿನ ಹೊನ್ನಿಹಾಳ ಪುನರ್ವಸತಿ ಕೇಂದ್ರದಲ್ಲಿರುವ ಸೋಮನಾಥ ದೇವಾಲಯ ಆವರಣದಲ್ಲಿ ಯಾತ್ರಿನಿವಾಸ ನಿರ್ಮಾಣ. | 27.37 | ಕೆಆರ್ಐಡಿಎಲ್ | 25.00 | 0.00 | 0.00 | 2.37 | 0.00 | ಪೂರ್ಣಗೊಂಡಿದೆ |
| 11 | ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕಿನ ಕುಂದರಗಿ ಶ್ರೀ ಭುವನೇಶ್ವರಿ ದೇವಿ ದೇವಸ್ಥಾನ ಸುರಗಿರಿ ಬೆಟ್ಟದಲ್ಲಿ ಮೂಲಭೂತ ಸೌಲಭ್ಯ ಕಾಮಗಾರಿ | 50.00 | ಕೆ.ಟಿ.ಐ.ಎಲ್ | 0.00 | 16.00 | 0.00 | 0.00 | 34.00 | ಅನುಷ್ಠಾನ ಸಂಸ್ಥೆಯಿಂದ ಅಂದಾಜು ಪಟ್ಟಿ ಬರಬೇಕಿದೆ. |
| | **ಜಮಖಂಡಿ ತಾಲ್ಲೂಕು** | | | | | | | | |
| 12 | ಜಮಖಂಡಿ ತಾಲ್ಲೂಕು ಮೈಗೂರು ಗ್ರಾಮದ ಶ್ರೀ ಶಿವಾನಂದ ಮಠದ ಬಳಿ ಯಾತ್ರಿನಿವಾಸ ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ | 75.00 | ನಿರ್ಮಿತಿ ಕೇಂದ್ರ | 65.00 | 0.00 | 0.00 | 0.00 | 10.00 | ಪೂರ್ಣಗೊಂಡಿದೆ |
| | **ರಬಕವಿ-ಬನಹಟ್ಟಿ ತಾಲ್ಲೂಕು** | | | | | | | | |
| 13 | ಬನಹಟ್ಟಿ ನಗರದ ಹಳೆಯಲ್ಲಮ್ಮ ದೇವಸ್ಥಾನದ ಆವರಣದಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳಲ್ಲಿ ಚೈನ್‌ಲಿಂಕ್, ಆಸನಗಳ ವ್ಯವಸ್ಥೆ ಹಾಗೂ ವಾಹನ ನಿಲುಗಡೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವ ಕಾಮಗಾರಿ | 20.00 | ನಿರ್ಮಿತಿ ಕೇಂದ್ರ | 5.00 | 15.00 | 0.00 | 0.00 | 0.00 | ಪೂರ್ಣಗೊಂಡಿದೆ |
| | **ಬಾಗಲಕೋಟೆ ಜಿಲ್ಲೆ ಒಟ್ಟು** | **354.53** | | **346.20** | **31.00** | **28.59** | **4.74** | **44.00** | |
| | **ಒಟ್ಟು ಮೊತ್ತ** | **804.53** | | **701.20** | **39.00** | **38.59** | **4.74** | **316.00** | |

## ಇಲಾಖೆಯ ಲೆಕ್ಕಶೀರ್ಷಿಕೆ ಸಂಖ್ಯೆ: 5452-01-101-0-05-132- ಬಂಡವಾಳ ವೆಚ್ಚಗಳು- ಪ್ರವಾಸಿ ತಾಣಗಳಲ್ಲಿ ಪ್ರಧಾನ ಮೂಲಭೂತ ಸೌಕರ್ಯ ಕಾಮಗಾರಿಗಳು ಅಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳಿಗೆ ಕಳೆದ 03 ವರ್ಷಗಳಿಂದ ಬಿಡುಗಡೆ ಮಾಡಿರುವ ಅನುದಾನದ ವಿವರ

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್ 2023 ರ ಅಂತ್ಯ ದವರೆಗೆ ಬಿಡುಗಡೆ ಮಾಡಿರುವ ಅನುದಾನ | ಬಿಡುಗಡೆ ಮಾಡಿರುವ ಅನುದಾನ | | | ಬಾಕಿ ಯಿರುವ ಅನುದಾನ | ಷರಾ |
|---|---|---|---|---|---|---|---|---|---|
| | | | | | 2023-24 | 2024-25 | 2025-26 | | |
| | **ವಿಜಯಪುರ ಜಿಲ್ಲೆ** | | | | | | | | |
| | **ವಿಜಯಪುರ ತಾಲ್ಲೂಕು** | | | | | | | | |
| 1 | ವಿಜಯಪುರ ನಗರದಲ್ಲಿ ತ್ರಿ ಸ್ಟಾರ್ ಹೋಟೆಲ್ ನಿರ್ಮಾಣ ಕಾಮಗಾರಿ | 1674.00 | ಮೆ: ರೈಟ್ಸ್ ಸಂಸ್ಥೆ | 1134.00 | 0.00 | 540.00 | 0.00 | 0.00 | ಅಂತಿಮ ಹಂತದಲ್ಲಿದೆ |
| | **ಸಿಂದಗಿ ತಾಲ್ಲೂಕು** | | | | | | | | |
| 2 | ವಿಜಯಪುರ ಜಿಲ್ಲೆ ಸಿಂಧಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗೋಲಗೇರಿ ಗ್ರಾಮದ ಶ್ರೀ ಗೊಲ್ಲಾಳೇಶ್ವರ ದೇವಸ್ಥಾನಕ್ಕೆ ಬರುವ ಪ್ರವಾಸಿಗರು / ಭಕ್ತಾದಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು. | 50.00 | ಕೆ.ಆರ್.ಐ.ಡಿ.ಎಲ್. | 0.00 | 35.00 | 0.00 | 0.00 | 15.00 | ಪ್ರಗತಿ ಯಲ್ಲಿದೆ |
| 3 | ವಿಜಯಪುರ ಜಿಲ್ಲೆ ಸಿಂಧಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯಕಂಚಿ ಗ್ರಾಮದ ಶ್ರೀಮೌಲಮಲ್ಲಿಕ ದೇವಸ್ಥಾನಕ್ಕೆ ಬರುವ ಪ್ರವಾಸಿಗರು / ಭಕ್ತಾದಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು. | 50.00 | ಕೆ.ಆರ್.ಐ.ಡಿ.ಎಲ್. | 0.00 | 35.00 | 0.00 | 0.00 | 15.00 | ಪ್ರಗತಿ ಯಲ್ಲಿದೆ |
| | **ಇಂಡಿ ತಾಲ್ಲೂಕು** | | | | | | | | |
| 4 | ಇಂಡಿ ತಾಲ್ಲೂಕು ಗುಬ್ಬೇವಾಡಿ ಗ್ರಾಮದ ಗುಬ್ಬತಾಯಿ ದೇವಸ್ಥಾನದಲ್ಲಿ ಯಾತ್ರಿನಿವಾಸ ನಿರ್ಮಾಣ | 25.00 | ಕೆ. ಆರ್. ಐ.ಡಿ.ಎಲ್. | 0.00 | 9.00 | 0.00 | 0.00 | 16.00 | ಮಾನ್ಯ ಸ್ಥಳೀಯ ಶಾಸಕರು ಮೂಲ ಸೌಲಭ್ಯ ಕಾಮಗಾರಿಗೆ ಅನುಮೋದನೆ ಕೋರಿದ್ದು, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಅನುಮೋದನೆ ನಿರೀಕ್ಷಿಸಲಾಗುತ್ತಿದೆ. |
| 5 | ಇಂಡಿ ತಾಲ್ಲೂಕು ಗುಂದವಾನ ಗ್ರಾಮದ ಪೂಜಾರಿ ವಸ್ತಿ ಬಳಿ ಮಾಳಿಂಗರಾಯ ದೇವಸ್ಥಾನದಲ್ಲಿ ಯಾತ್ರಿನಿವಾಸ ನಿರ್ಮಾಣ | 25.00 | ಕೆ. ಆರ್. ಐ.ಡಿ.ಎಲ್. | 0.00 | 8.00 | 0.00 | 0.00 | 17.00 | |
| 6 | ಇಂಡಿ ತಾಲ್ಲೂಕು ಅಹಿರಸಂಗ ಗ್ರಾಮದ ಸಯ್ಯದ ಬುಖಾರಿ ದರ್ಗಾ ನವೀಕರಣ | 25.00 | ಕೆ ಆರ್. ಐ.ಡಿ.ಎಲ್. | 0.00 | 8.00 | 0.00 | 0.00 | 17.00 | ನಿವೇಶನ ಹಸ್ತಾಂತರವಾದ ನಂತರ ಆಡಳಿತಾತ್ಮಕ ಅನುಮೋದನೆ ನೀಡಬೇಕಿರುತ್ತದೆ. |
| 7 | ಇಂಡಿ ತಾಲ್ಲೂಕು ಅರ್ಜನಾಳ ಗ್ರಾಮದ ಬಲಭೀಮ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ | 25.00 | ಕೆ. ಆರ್. ಐ.ಡಿ.ಎಲ್. | 0.00 | 8.00 | 0.00 | 0.00 | 17.00 | ಮಾನ್ಯ ಸ್ಥಳೀಯ ಶಾಸಕರು ಮೂಲ ಸೌಲಭ್ಯ ಕಾಮಗಾರಿಗೆ ಅನುಮೋದನೆ ಕೋರಿದ್ದು, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಅನುಮೋದನೆ ನಿರೀಕ್ಷಿಸಲಾಗುತ್ತಿದೆ. |

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್ 2023 ರ ಅಂತ್ಯದವರೆಗೆ ಬಿಡುಗಡೆ ಮಾಡಿರುವ ಅನುದಾನ | ಬಿಡುಗಡೆ ಮಾಡಿರುವ ಅನುದಾನ | | | ಬಾಕಿ ಯಿರುವ ಅನುದಾನ | ಷರಾ |
|---|---|---|---|---|---|---|---|---|---|
| | | | | | 2023-24 | 2024-25 | 2025-26 | | |
| 8 | ಇಂಡಿ ತಾಲ್ಲೂಕು ಪಡನೂರ ಗ್ರಾಮದ ಶ್ರೀ ಭೀಮಾಶಂಕರ ದೇವಸ್ಥಾನಕ್ಕೆ, ಮೂಲ ಸೌಕರ್ಯ ಒದಗಿಸುವುದು. | 50.00 | ಕೆ. ಆರ್. ಐ.ಡಿ.ಎಲ್. | 0.00 | 20.00 | 0.00 | 0.00 | 30.00 | ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ದಿನಾಂಕ: 15.04.2024 ರನ್ವಯ ಸರ್ಕಾರದ ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸಬೇಕಿದೆ |
| 9 | ಇಂಡಿ ತಾಲ್ಲೂಕು ತಡವಲಗಾ ಗ್ರಾಮದ ಜೋಡುಗುಡಿ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ಮೂಲಭೂತ ಸೌಕರ್ಯಗಳ ಒದಗಿಸುವುದು. | 50.00 | ಕೆ. ಆರ್. ಐ.ಡಿ.ಎಲ್. | 0.00 | 20.00 | 0.00 | 0.00 | 30.00 | ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ದಿನಾಂಕ: 15.04.2024 ರನ್ವಯ ಸರ್ಕಾರದ ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸಬೇಕಿದೆ |
| 10 | ಇಂಡಿ ತಾಲ್ಲೂಕು ಹಿರೇಬೇವನೂರು ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ಮೂಲಭೂತ ಸೌಕರ್ಯಗಳ ನಿರ್ಮಾಣ ಕಾಮಗಾರಿ | 25.00 | ಕೆ. ಆರ್. ಐ.ಡಿ.ಎಲ್. | 0.00 | 10.00 | 0.00 | 0.00 | 15.00 | ನಿವೇಶನ ಹಸ್ತಾಂತರವಾದ ನಂತರ ಆಡಳಿತಾತ್ಮಕ ಅನುಮೋದನೆ ನೀಡಬೇಕಿರುತ್ತದೆ. |
| | **ವಿಜಯಪುರ ಜಿಲ್ಲೆ ಒಟ್ಟು** | **1999.00** | | **1134.00** | **153.00** | **540.00** | **0.00** | **172.00** | |
| | **ಬಾಗಲಕೋಟೆ ಜಿಲ್ಲೆ** | | | | | | | | |
| | **ಬಾದಾಮಿ ತಾಲ್ಲೂಕು** | | | | | | | | |
| 11 | ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲಿನಲ್ಲಿರುವ ಇಲಾಖೆಯ 24 ಎಕರೆ ಜಮೀನಿನಲ್ಲಿ ಟೂರಿಸಂ ಪ್ಲಾಜಾ ನಿರ್ಮಾಣ | 2925.00 | ಆಯುಕ್ತರು, ಕರ್ನಾಟಕ ಗೃಹ ಮಂಡಳಿ | 1462.00 | 0.00 | 900.00 | 0.00 | 563.00 | ಪ್ರಗತಿಯಲ್ಲಿದೆ |
| 12 | ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಶಿವಯೋಗ ಮಂದಿರ ಸುಕ್ಷೇತ್ರಕ್ಕೆ, ಆಗಮಿಸುವ ಭಕ್ತಾದಿಗಳು / ಪ್ರವಾಸಿಗರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ದೃಷ್ಟಿಯಿಂದ ಪುರುಷರು ಮತ್ತು ಮಹಿಳೆಯರ ಸ್ನಾನಗೃಹ ಮತ್ತು ಶೌಚಾಲಯಗಳ ನಿರ್ಮಾಣ ಕಾಮಗಾರಿ | 35.00 | ಕೆ.ಟಿ. ಐ.ಎಲ್. | 0.00 | 35.00 | 0.00 | 0.00 | 0.00 | ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ದಿನಾಂಕ: 15.04.2024 ರನ್ವಯ ಸರ್ಕಾರದ ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸಬೇಕಿದೆ |
| 13 | ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ ತ್ರಿ ಸ್ಟಾರ್ ಹೋಟೆಲ್ ನಿರ್ಮಾಣ ಕಾಮಗಾರಿ | 1832.00 | ಮೆ: ರೈಟ್ಸ್ ಸಂಸ್ಥೆ | 850.00 | 0.00 | 910.00 | 0.00 | 72.00 | ಶೇ.80 ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿ ಪ್ರಗತಿಯಲ್ಲಿದೆ. |
| 14 | ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ. ನರನೂರು ಗ್ರಾಮದ ಬುಡ್ಡಪ್ಪ ಅಜ್ಜನ ಸ್ಥಳಕ್ಕೆ ಆಗಮಿಸುವ ಭಕ್ತಾದಿಗಳ ಮೂಲಭೂತ ಸೌಕರ್ಯ ಹಾಗೂ ಅಭಿವೃದ್ಧಿ ಕಾಮಗಾರಿ | 30.00 | ಕೆ.ಟಿ.ಐ.ಎಲ್ | 0.00 | 0.00 | 0.00 | 30.00 | 0.00 | ಅನುಷ್ಠಾನ ಸಂಸ್ಥೆಯಿಂದ ಅಂದಾಜು ಪಟ್ಟಿ ಬರಬೇಕಿದೆ. |

(ರೂ. ಲಕ್ಷಗಳಲ್ಲಿ)

| ಕ್ರ ಸಂ | ಯೋಜನೆಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್ 2023 ರ ಅಂತ್ಯದವರೆಗೆ ಬಿಡುಗಡೆ ಮಾಡಿರುವ ಅನುದಾನ | ಬಿಡುಗಡೆ ಮಾಡಿರುವ ಅನುದಾನ | | | ಬಾಕಿ ಯಿರುವ ಅನುದಾನ | ಷರಾ |
|---|---|---|---|---|---|---|---|---|---|
| | | | | | 2023-24 | 2024-25 | 2025-26 | | |
| | **ಬೀಳಗಿ ತಾಲ್ಲೂಕು** | | | | | | | | |
| 15 | ಬಾಗಲಕೋಟೆ ಜಿಲ್ಲೆ ಬೀಳಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಿಕ್ಕಸಂಗಮ ಪ್ರವಾಸಿ ತಾಣದಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸುವುದು | 200.00 | ಕೆ ಟಿ ಐ ಎಲ್ | 0.00 | 67.00 | 0.00 | 0.00 | 133.00 | ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಇಲಾಖೆಯ ತಾಂತ್ರಿಕ ಶಾಖೆಯ ಅಭಿಪ್ರಾಯ ಪಡೆಯಲಾಗುತ್ತಿದೆ |
| | **ಬಾಗಲಕೋಟೆ ಜಿಲ್ಲೆ ಒಟ್ಟು** | **4822.00** | | **2312.00** | **35.00** | **1810.00** | **30.00** | **635.00** | |
| | **ಒಟ್ಟು** | **6821.00** | | **3446.00** | **188.00** | **2350.00** | **30.00** | **807.00** | |

**ಕರ್ನಾಟಕ ಸರ್ಕಾರ**

ಸಂಖ್ಯೆ: TOR/95/TDP/2026

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:01-08-2026.

**ಇವರಿಂದ:**
ಸರ್ಕಾರದ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ,
ವಿಕಾಸಸೌಧ, ಬೆಂಗಳೂರು.

**ಇವರಿಗೆ:**
ವ್ಯವಸ್ಥಾಪಕ ನಿರ್ದೇಶಕರು,
ಜೆ.ಎಲ್.ಆರ್.
ಬೆಂಗಳೂರು.

ಮಾನ್ಯರೆ,

ವಿಷಯ: ಹೆರಕಲ್-ಚಿಕ್ಕಸಂಗಮ ಪ್ರದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಕುರಿತು.

ಉಲ್ಲೇಖ: Deputy Commissioner, Belagavi Revenue Division ಇವರ ಇ-ಆಫೀಸ್ ಕಡತ ಸಂಖ್ಯೆ: DC-BGK-40/46/2026-DC_BAGALKOT (Computer No. 2233106)

...

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಹೆರಕಲ್-ಚಿಕ್ಕಸಂಗಮ ಪ್ರದೇಶದಲ್ಲಿ ಪ್ರವಾಸೋದ್ಯಮ ಮತ್ತು ಬೋಟಿಂಗ್ ಚಟುವಟಿಕೆಗಳನ್ನು ಜೆ.ಎಲ್.ಆರ್. ನಿಂದ ಅಭಿವೃದ್ಧಿ ಪಡಿಸುವ ಕುರಿತಂತೆ ಉಲ್ಲೇಖಿತ ಕಡತದಲ್ಲಿ ಸ್ವೀಕೃತವಾದ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಬಗ್ಗೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ತಮ್ಮ ಸ್ಪಷ್ಟ ಅಭಿಪ್ರಾಯವನ್ನೊಳಗೊಂಡ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ಸ್ವೀಕರಿಸಿದೆ
ದಿ: 03/08/2026

ತಮ್ಮ ನಂಬುಗೆಯ,

01/08/26.
**(ರಘುನಾಥಗೌಡ ಎಸ್. ಪಾಟೀಲ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ.

1/8/2026

## ಕರ್ನಾಟಕ ಸರ್ಕಾರ

ಸಂಖ್ಯೆ: TOR/95/TDP/2026

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:01-08-2026.

### ಅನಧಿಕೃತ ಟಿಪ್ಪಣಿ

ವಿಷಯ: ಆಲಮಟ್ಟಿ ಹಿನ್ನೀರಿನಲ್ಲಿ ಕೇಂದ್ರ ಸರ್ಕಾರದ Inland Waterway Authority of India (IWAI) ರವರ ಸಾಗರ ಮಾಲಾ ಯೋಜನೆಯಡಿ River Cruise Tourism ಅಭಿವೃದ್ಧಿ ಪಡಿಸುವ ಕುರಿತು.

ಉಲ್ಲೇಖ: Deputy Commissioner, Belagavi Revenue Division ಇವರ ಇ-ಆಫೀಸ್ ಕಡತ ಸಂಖ್ಯೆ: DC-BGK-40/46/2026-DC_BAGALKOT (Computer No. 2233106)

---

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಕಡತದಲ್ಲಿ ಬೀಳಗಿ ತಾಲ್ಲೂಕಿನ ಹೆರಕಲ್ ದಿಂದ ಆಲಮಟ್ಟಿ ಪ್ರದೇಶದವರೆಗೆ ವ್ಯಾಪಿಸಿರುವ ಆಲಮಟ್ಟಿ ಹಿನ್ನೀರಿನಲ್ಲಿ ಕೇಂದ್ರ ಸರ್ಕಾರದ Inland Waterway Authority of India (IWAI) ರವರ ಸಾಗರ ಮಾಲಾ ಯೋಜನೆಯಡಿ River Cruise Tourism ಅನ್ನು ರೂ.12.20 ಕೋಟಿ ಅಂದಾಜು ಮೊತ್ತದಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ ವತಿಯಿಂದ ಅನುಷ್ಠಾನಗೊಳಿಸಲು ನಿರ್ದೇಶನ ನೀಡುವಂತೆ ಕೋರಿರುವ ಪ್ರಸ್ತಾವನೆಯ ಪ್ರತಿಯನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ.

01/08/26.
(ರಘುನಾಥಗೌಡ ಎಸ್. ಪಾಟೀಲ)
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ.

ಇವರಿಗೆ:
ಅಧೀನ ಕಾರ್ಯದರ್ಶಿ
ಮೂಲಸೌಕರ್ಯ ಅಭಿವೃದ್ಧಿ, ಬಂದರುಗಳು
ಮತ್ತು ಒಳನಾಡು ಜಲಸಾರಿಗೆ ಇಲಾಖೆ,
ವಿಕಾಸಸೌಧ, ಬೆಂಗಳೂರು.